**ಸಾಕ್ಷಿಗೆ ದಿನಾಂಕಃ 02.07.2026 ರಂದು ಪ್ರಮಾಣ ಮಾಡಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಶ್ರೀ. ಜಿ.ಆರ್. ವಕೀಲರಿಂದ:**

ಏಳು ಜನ ಪ್ರತಿವಾದಿಗಳು ಸೇರಿ ಪ್ರತಿವಾದ ಪತ್ರವನ್ನು ಸಲ್ಲಿಸಿರುತ್ತೇವೆ. 1, 2 ಮತ್ತು 7 ನೇ ಪ್ರತಿವಾದಿಗಳು ಸೇರಿ ಪ್ರತಿವಾದ ಪತ್ರವನ್ನು ಸಲ್ಲಿಸಿರುತ್ತೇವೆ ಎಂದರೆ ಸರಿಯಲ್ಲ. ಜಂಜರ್ ಸಂಖ್ಯೆ 33 ಆಸ್ತಿ ಸಂಖ್ಯೆ 33 ಅಳತೆ 40 x 60 ಅಡಿ ಮೂಲತಃ ನಮ್ಮ ತಂದೆಗೆ ಸೇರಿತ್ತು ಎಂದು ನನ್ನ ತಕರಾರಿನಲ್ಲಿ ಹೇಳಿರುತ್ತೇನೆ ಎಂದರೆ ಸರಿ. ಸದರಿ ಸ್ವತ್ತಿನ ಮೂಲ ದಾಖಲೆಗಳು ನನ್ನ ಬಳಿ ಇರುತ್ತದೆ. ಸದರಿ ಸ್ವತ್ತು ನಮ್ಮ ತಂದೆಗೆ ಪಿತ್ರಾರ್ಜಿತವಾಗಿ ಬಂದಿರುತ್ತದೆ. ಸದರಿ ವಿಚಾರವನ್ನು ನಾನು ತಕರಾರಿನಲ್ಲಿ ಹೇಳಿರುತ್ತೇನೆ. ತಕರಾರಿನಲ್ಲಿ ಸದರಿ ವಿಚಾರ ಹೇಳದೆ ಇದ್ದರೂ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನಮ್ಮ ತಂದೆಗೆ ಸದರಿ ಸ್ವತ್ತು ಪಿತ್ರಾರ್ಜಿತವಾಗಿ ಬಂದಿತ್ತು ಎಂದು ತೋರಿಸಲು ದಾಖಲೆಯನ್ನು ಹಾಜರುಪಡಿಸಿರುತ್ತೇನೆ. ದಾಖಲೆಯನ್ನು ಹಾಜರುಪಡಿಸದೆ ಇದ್ದರೂ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನಿ.ಡಿ.4 ರ ಪ್ರತಿ ಪುಟದಲ್ಲಿ ನಮ್ಮ ತಂದೆಯ ಸಹಿ ಇರುತ್ತದೆ. ವಕಾಲತ್ತಿನಲ್ಲಿರುವ ಸಹಿ ನಮ್ಮ ತಂದೆಯ ಸಹಿ ಆಗಿರುತ್ತದೆ. ಪ್ರತಿವಾದ ಪತ್ರದಲ್ಲಿರುವ ಸಹಿ ನಮ್ಮ ತಂದೆಯ ಸಹಿ ಆಗಿರುತ್ತದೆ.

ನಿ.ಪಿ.14 ರಲ್ಲಿರುವ ಸಹಿ ನಮ್ಮ ತಂದೆಯ ಸಹಿ ಆಗಿರುವುದಿಲ್ಲ. ಸದರಿ ವಕಾಲತ್ತು, ತಕರಾರು ಮತ್ತು ನಿ.ಡಿ.4 ರಲ್ಲಿರುವ ಸಹಿ ಹಾಗೂ ನಿ.ಪಿ.14 ರಲ್ಲಿರುವ ಸಹಿ ಒಂದೇ ಸಹಿ ಆಗಿರುತ್ತದೆ ಎಂದರೆ ಸರಿಯಲ್ಲ. ದಾವಾ ಸ್ವತ್ತನ್ನು ಕಬಳಿಸುವ ಸಲುವಾಗಿ ಒಂದೇ ಸಹಿ ಆಗಿದ್ದರೂ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಸದರಿ ದಾಖಲೆಗಳ ಸಹಿಯನ್ನು ಪರೀಕ್ಷೆ ಮಾಡಲು ತಜ್ಞರ ವರದಿ ಪಡೆಯಲು ನನ್ನಿಂದ ತಕರಾರು ಇರುವುದಿಲ್ಲ. ನಿ.ಪಿ.14 ರಂತೆ ನಮ್ಮ ತಂದೆ ದಾವಾ ಸ್ವತ್ತನ್ನು ಮಾರಾಟ ಮಾಡಿದ ಕಾರಣ ಅದನ್ನು ನಿ.ಡಿ.4 ರಂತೆ ಬರೆದುಕೊಡಲು ಹಕ್ಕು, ಅಧಿಕಾರ ಇರಲಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತಿನಲ್ಲಿ ನಮಗೆ ಸೇರಿದ ಮಂಗಳೂರಿನ ಹೆಂಚಿನ ಮನೆ ಇರಲಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತನ್ನು ಕಬಳಿಸುವ ಸಲುವಾಗಿ ನಮ್ಮ ಮನೆಯವರ ಜೊತೆ ಶಾಮೀಲಾಗಿ ಕಂದಾಯ ದಾಖಲೆಗಳನ್ನು ಸೃಷ್ಟಿ ಮಾಡಿರುತ್ತೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇರುವುದಿಲ್ಲ.**

**(ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಒ.**

**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು**

**ಮತ್ತು ಪ್ರ.ದ.ನ್ಯಾದಂ. ತಿ.ನರಸೀಪುರ.**